Orders on I.A. No. I Criminal Misc. No 79/2022

KAHS510002322022

Presented on : 16-02-2022
Registered on : 16-02-2022
I.A.No.1 Decided on : 30-08-2023
Duration : 1 year, 6 months, 14 days

**Crl.Misc./79/2022**

ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೇಲೂರು.

ದಿನಾಂಕಃ 30 ನೇ ಆಗಸ್ಟ್ ಮಾಹೆ, 2023

ಉಪಸ್ಥಿತರುಃ

ಶ್ರೀ ಪ್ರಸನ್ನಕುಮಾರ್ ಸಿ.., ಬಿ.ಎ.ಎಲ್., ಎಲ್.ಎಲ್.ಬಿ.
ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಬೇಲೂರು

ಕ್ರಿಮಿನಲ್ ಮಿಸ್ ನಂಃ 79/2022

1. ಶ್ರೀಮತಿ ಕೆ.ಎಸ್.ಚೈತ್ರ ಕೋಂ ಹೆಚ್. ಸಿ. ಪ್ರಭಾಕರ,
34 ವರ್ಷ,

2. ಚಿಃ ಜೀವನ್ ಬಿನ್ ಹೆಚ್.ಸಿ. ಪ್ರಭಾಕರ,
11 ವರ್ಷ,
2 ನೇ ಅರ್ಜಿದಾರರು ಮೈನರ್ ಆಗಿದ್ದು, ಅವರ ಪರವಾಗಿ
ಅವರ ಖಾಸಾ ತಾಯಿ 1 ನೇ ಅರ್ಜಿದಾರರು ಪ್ರತಿನಿಧಿಸುತ್ತಾರೆ.
ಇಬ್ಬರ ವಿಳಾಸಃ ಕಂದಾವರ ಗ್ರಾಮ, ಬೇಲೂರು ತಾಲ್ಲೂಕು,
ತೊಳಲು, ಹಾಸನ ಜಿಲ್ಲೆ. ..... ಅರ್ಜಿದಾರರು

(ಅರ್ಜಿದಾರರ ಪರವಾಗಿ ಶ್ರೀ ಎಸ್.ಮಲ್ಲಿಕಾರ್ಜುನಸ್ವಾಮಿ, ವಕೀಲರು ಪ್ರತಿನಿಧಿಸಿರುತ್ತಾರೆ)

ವಿರುದ್ಧ

ಶ್ರೀ ಹೆಚ್.ಸಿ.ಪ್ರಭಾಕರ್ ಬಿನ್ ಚಂದ್ರಪ್ಪಶೆಟ್ಟಿ ಹನುಮಿಡಿ,
ವಾಸಃ ನಂ.487, 7 ನೇ ಮುಖ್ಯ ರಸ್ತೆ,
ಅಪ್ಪಯ್ಯಸ್ವಾಮಿ ಲೇಔಟ್,
ಉತ್ತರಹಳ್ಳಿ, ಬೆಂಗಳೂರು ನಗರ.
ಕೆಲಸಃ ಅಮೇಜಾನ್ ಡಿಸ್ಟ್ರಿಬ್ಯೂಟರ್ಸ್ ಪ್ರೈವೆಟ್ ಲಿ.,
ನಂ.48/3, ಕೆಎಸ್ಎಸ್.ಪಿ ಕಾಂಪ್ಲೆಕ್ಸ್,
ಕುಡ್ಲು ಗೇಟ್, ಹೊಸೂರು ಮುಖ್ಯ ರಸ್ತೆ,
ಬೆಂಗಳೂರು - 560068. ..... ಎದುರುದಾರರು

(ಎದುರುದಾರರ ಪರವಾಗಿ ಶ್ರೀ ಎಸ್.ಎನ್.ಲಿಂಗೇಶ, ವಕೀಲರು ಪ್ರತಿನಿಧಿಸಿರುತ್ತಾರೆ)

ಮಧ್ಯಂತರ ಅರ್ಜಿ - 1 ರಲ್ಲಿನ ಪಕ್ಷಗಾರರು

ಶ್ರೀಮತಿ ಕೆ.ಎಸ್.ಚೈತ್ರಾ ಮತ್ತು ಇನ್ನೊಬ್ಬರು

ವಿರುದ್ಧ

ಶ್ರೀ ಹೆಚ.ಸಿ.ಪ್ರಭಾಕರ

:: ಮಧ್ಯಂತರ ಅರ್ಜಿ - 1 ರ ಮೇಲಿನ ಆದೇಶ ::

ಪ್ರಸ್ತುತ ಅರ್ಜಿದಾರರು, ಎದುರುದಾರರ ವಿರುದ್ಧ ಮಧ್ಯಂತರ ಅರ್ಜಿ–1 ನ್ನು ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ರಕ್ಷಣಾ ಅಧಿನಿಯಮ 2005 ಕಲಂ 22 ರಡಿ ಸಲ್ಲಿಸಿ, ಮಾಸಿಕ ರೂ.30,000-00 ಗಳ ಮಧ್ಯಂತರ ಜೀವನಾಂಶವನ್ನು ಎದುರುದಾರರು ಅರ್ಜಿದಾರರಿಗೆ ಪಾವತಿಸುವಂತೆ ಆದೇಶ ಮಾಡಬೇಕಾಗಿ ಪ್ರಾರ್ಥಿಸಿರುತ್ತಾರೆ.

ಪ್ರಸ್ತುತ ಮಧ್ಯಂತರ ಅರ್ಜಿ- 1 ರಲ್ಲಿನ ಸಾರಾಂಶ ಏನೆಂದರೆಃ-

2. ಅರ್ಜಿದಾರರು ಮತ್ತು ಎದುರುದಾರರ ವಿವಾಹವು ದಿನಾಂಕಃ 07.03.2010 ರಂದು ಹಿಂದೂ ಸಂಪ್ರದಾಯದಂತೆ ಶ್ರೀ ರಾಘವೇಂದ್ರ ಕಲ್ಯಾಣ ಮಂಟಪ, ಕೋಟೆ, ಬೇಲೂರು ಇಲ್ಲಿ ಜರುಗಿದ್ದು, ಮದುವೆಯ ಸಮಯದಲ್ಲಿ ಎದುರುದಾರರಿಗೆ ಅರ್ಜಿದಾರರ ಮನೆಯವರು

ವರದಕ್ಷಿಣೆ ರೂಪದಲ್ಲಿ ಸಾಕಷ್ಟು ಹಣ ಹಾಗೂ ಚಿನ್ನಾಭರಣಗಳನ್ನು ನೀಡಿ ಹೇರಳವಾಗಿ ಹಣವನ್ನು ಖರ್ಚು ಮಾಡಿ ಮದುವೆ ಮಾಡಿರುತ್ತಾರೆ. ಉಭಯತ್ರರ ದಾಂಪತ್ಯದ ಫಲವಾಗಿ 2 ನೇ ಅರ್ಜಿದಾರರಾದ ಜೀವನ್ ಎಂಬ ಗಂಡು ಮಗ ಜನಿಸಿರುತ್ತಾರೆ. ಮದುವೆಯಾದ ದಿನದಿಂದಲೂ ಸಹ ಎದುರುದಾರರು ತನ್ನ ತಾಯಿ ಹಾಗೂ ಇನ್ನಿತರ ಸಂಬಂಧಿಕರ ಮಾತನ್ನು ಕೇಳಿಕೊಂಡು 1 ನೇ ಅರ್ಜಿದಾರರಿಗೆ ಸರಿಯಾಗಿ ಊಟವನ್ನು ನೀಡದೆ ಹೊಡೆದು ಬಡಿದು ಮಾಡಿ ದೈಹಿಕವಾಗಿ ಹಾಗೂ ಮಾನಸಿಕವಾಗಿ ಹಿಂಸೆ ಕಿರುಕುಳ ನೀಡುತ್ತಿದ್ದು, ಆದರೂ ಕೂಡಾ 1 ನೇ ಅರ್ಜಿದಾರರು ಎದುರುದಾರರ ಕೃತ್ಯವನ್ನು ಸಹಿಸಿಕೊಂಡು ಮರ್ಯಾದೆಗೆ ಅಂಜಿ ಬದುಕುತ್ತಿರುತ್ತಾರೆ. 2 ನೇ ಅರ್ಜಿದಾರರು ಬೆಂಗಳೂರಿನ ಪೂರ್ಣಪ್ರಜ್ಞ ಲೇಔಟ್ ನ ಕಸ್ತೂರಬಾ ಪಬ್ಲಿಕ್ ಶಾಲೆಯಲ್ಲಿ 6 ನೇ ತರಗತಿಯನ್ನು ವ್ಯಾಸಂಗ ಮಾಡುತ್ತಿದ್ದು, ಎದುರುದಾರರು 2 ನೇ ಅರ್ಜಿದಾರರ ವ್ಯಾಸಂಗವನ್ನು ನೋಡಿಕೊಳ್ಳದೇ ತಿರಸ್ಕರಿಸಿದ್ದು, 1 ನೇ ಅರ್ಜಿದಾರರೇ ಯಾವುದೇ ಅದಾಯವಿಲ್ಲದೆ 2 ನೇ ಅರ್ಜಿದಾರರನ್ನು ಸಾಕಿ ಸಲುಹಿ ನೋಡಿಕೊಳ್ಳುತ್ತಿದ್ದಾರೆ. ಎದುರುದಾರರು ವಿನಾಃ ಕಾರಣ 1 ನೇ ಅರ್ಜಿದಾರರಿಗೆ ಹಲ್ಲೆ ಮಾಡುತ್ತಿದ್ದು, ಸದರಿ ವಿಚಾರವನ್ನು ಹಿರಿಯರಿಗೆ ತಿಳಿಸಿ ಬುದ್ಧಿವಾದ ಹೇಳಿದರೂ ಸಹ ಎದುರುದಾರರು ತನ್ನ ಕೃತ್ಯವನ್ನು ನಿಲ್ಲಿಸಿರುವುದಿಲ್ಲ. ನಂತರ ದಿನಾಂಕಃ 21.11.2021 ರಂದು ರಾತ್ರಿ 9 ಗಂಟೆ ಸಮಯದಲ್ಲಿ 1 ನೇ ಅರ್ಜಿದಾರರು ಎದುರುದಾರಿಗೆ 2 ನೇ ಅರ್ಜಿದಾರರ ಶಾಲೆಗೆ ಶುಲ್ಕವನ್ನು ಪಾವತಿಸುವಂತೆ ಬೇಡಿಕೊಂಡಿದ್ದು ಇಲ್ಲದಿದ್ದರೆ ಪರೀಕ್ಷೆಗೆ ಕೂರಿಸುವುದಿಲ್ಲವೆಂದು ಶಾಲೆಯ ಆಡಳಿತ ಮಂಡಳಿ ಹೇಳಿಕಳುಹಿಸಿರುತ್ತಾರೆ ಎಂದು ಹೇಳಿದ್ದು, ಅದಕ್ಕೆ ಎದುರುದಾರರು 1 ನೇ ಅರ್ಜಿದಾರರಿಗೆ ಹೀನಾಮಾನವಾಗಿ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿ ತೀವ್ರ ತರವಾಗಿ ಗಾಯವನ್ನುಂಟು ಮಾಡಿದ ಪರಿಣಾಮ 1 ನೇ ಅರ್ಜಿದಾರರು ಪ್ರಜ್ಞೆತಪ್ಪಿ ಬಿದ್ದಿದ್ದು, ನಂತರ ಅಕ್ಕಪಕ್ಕದ ಮನೆಯವರು 1 ನೇ ಅರ್ಜಿದಾರರನ್ನು ಮಹಾರಾಜ ಅಗ್ರಸೇನಾ ಆಸ್ಪತ್ರೆಗೆ ದಾಖಲಿಸಿರುತ್ತಾರೆ

3. ಅರ್ಜಿದಾರರು ಮುಂದುವರೆದು ತನ್ನ ಅರ್ಜಿಯಲ್ಲಿ ಹೇಳುವುದೇನೆಂದರೆ, 1 ನೇ ಅರ್ಜಿದಾರರು ಎದುರುದಾರರ ವಿರುದ್ಧ ಸುಬ್ರಮಣ್ಯಪುರ ಪೋಲೀಸ್ ಠಾಣೆಯಲ್ಲಿ ಕ್ರೈ.ನಂ.300/2021 ರಂತೆ ಭಾರತೀಯ ದಂಡ ಸಂಹಿತೆ ಕಲಂ.498 ಎ, 324 ರ ಅಡಿಯಲ್ಲಿ

ದೂರನ್ನು ದಾಖಲಿಸಿರುತ್ತಾರೆ. ಎದುರುದಾರರು ಈ ಅರ್ಜಿಯನ್ನು ಸಲ್ಲಿಸುವ 5 - 6 ತಿಂಗಳುಗಳಿಂದ ಅರ್ಜಿದಾರರ ಯೋಗಕ್ಷೇಮವನ್ನು ನೋಡಿಕೊಳ್ಳದೇ ನಿರ್ಲಕ್ಷಿಸಿದ್ದು ಅಲ್ಲದೇ, ದಿನಾಂಕಃ 24.01.2022 ರಂದು ಮನೆಯಿಂದ ಹೊರಹಾಕಲು ಪ್ರಯತ್ನಿಸಿದ್ದು, ಅಕ್ಕಪಕ್ಕದವರ ಸಹಾಯದಿಂದ ಅತೀ ಕಷ್ಟದಿಂದ ಅರ್ಜಿದಾರರು ಜೀವನವನ್ನು ಸಾಗಿಸುತ್ತಿದ್ದಾರೆ. ಎದುರುದಾರರು ಅರ್ಜಿದಾರರ ಯೋಗಕ್ಷೇಮ ಊಟ-ಬಟ್ಟೆ ವಸತಿ ಸೌಲಭ್ಯಗಳನ್ನು ಒದಗಿಸಿರುವುದಿಲ್ಲ. ಅಲ್ಲದೇ ಎದುರುದಾರರು ಸೇಲ್ಸ್ ಎಕ್ಸಿಕ್ಯೂಟೀವ್ ಆಗಿ ಅಮೇಜಾನ್ ಪ್ರೈವೇಟ್ ಲಿ., ನಲ್ಲಿ ಕೆಲಸ ಮಾಡುತ್ತಾ ತಿಂಗಳಿಗೆ ರೂ.60,000/- ಗಳ ವೇತನವನ್ನು ಪಡೆಯುತ್ತಿದ್ದು, ಆದ್ದರಿಂದ ಅರ್ಜಿದಾರರು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿ, ಮಾಸಿಕ ರೂ.30,000-00 ಗಳ ಮಧ್ಯಂತರ ಜೀವನಾಂಶವನ್ನು ಎದುರುದಾರರು ಅರ್ಜಿದಾರರಿಗೆ ನೀಡುವಂತೆ ಆದೇಶ ಮಾಡಬೇಕಾಗಿ ಕೋರಿರುತ್ತಾರೆ.

4. ಅರ್ಜಿದಾರರು ಮುಖ್ಯ ಅರ್ಜಿಯನ್ನು ದಾಖಲಿಸಿದ ನಂತರ, ಸದರಿ ಅರ್ಜಿಯ ಅನ್ವಯ ಹೊರಡಿಸಿದ ನೋಟೀಸ್‌ಗೆ ಪ್ರತಿಯಾಗಿ ಎದುರುದಾರರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ವಿವರವಾದ ತಕರಾರನ್ನು ಸಲ್ಲಿಸಿರುತ್ತಾರೆ. ಸದರಿ ತಕರಾರರನ್ನು ಮಧ್ಯಂತರ ಅರ್ಜಿ- 1 ಕ್ಕೆ ಆಕ್ಷೇಪಣೆಯನ್ನಾಗಿ ಅಳವಡಿಸಿಕೊಂಡಿರುತ್ತಾರೆ. ಎದುರುದಾರರು ತಮ್ಮ ತಕರಾರಿನಲ್ಲಿ 1 ನೇ ಅರ್ಜಿದಾರರ ಮತ್ತು ಎದುರುದಾರರ ನಡುವೆ ವಿವಾಹವಾಗಿರುವುದನ್ನು ಹಾಗೂ ಸದರಿಯವರ ದಾಂಪತ್ಯದ ಫಲವಾಗಿ 2 ನೇ ಅರ್ಜಿದಾರರು ಜನಿಸಿರುವ ಬಗ್ಗೆ ಒಪ್ಪಿಕೊಂಡಿರುತ್ತಾರೆ. ಉಳಿದಂತೆ ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಹೇಳಿರುವ ಅಂಶಗಳನ್ನು ಸಂಪೂರ್ಣವಾಗಿ ಅಲ್ಲಗೆಳೆಯುತ್ತಾ ಹೇಳುವುದೇನೆಂದರೆ, 1 ನೇ ಅರ್ಜಿದಾರರು ವಿವಾಹವಾದ ದಿನದಿಂದಲೂ ಸಹ ಎದುರುದಾರರೊಂದಿಗೆ ಸರಿಯಾಗಿ ಜೀವನ ನಡೆಸುತ್ತಿರುವುದಿಲ್ಲ, ಅಲ್ಲದೆ ಮನೆಯ ಕೆಲಸಗಳನ್ನು ಸಹ ಸರಿಯಾಗಿ ಮಾಡದೆ ಎದುರುದಾರರ ವಯಸ್ಸಾದ ತಾಯಿಯನ್ನು ನೋಡಿಕೊಳ್ಳದೇ ವಿನಾಃ ಕಾರಣ ಜಗಳ ಮಾಡಿ ತಿಂಡಿ ಊಟವನ್ನು ನೀಡದೇ ಮನೆಯ ಅಕ್ಕಪಕ್ಕದವರೊಂದಿಗೆ ಹಾಗೂ ಎದುರುದಾರರ ಸಂಬಂಧಿಕರ ಜೊತೆ ಯಾವಾಗಲೂ ಗಲಾಟೆ ಮಾಡುತ್ತಿರುತ್ತಾರೆ. ಅಲ್ಲದೆ 1 ನೇ ಅರ್ಜಿದಾರರು ತನ್ನ ತವರು ಮನೆಗೆ ಹೋಗಿ ವಾಸ ಮಾಡುತ್ತಿದ್ದು, ಅಲ್ಲಿಯೂ ಸಹ ಎದುರುದಾರರು

ಸಮಾಧಾನ ಪಡಿಸಿ ವಾಪಸ್ಸು ತನ್ನ ಗ್ರಾಮಕ್ಕೆ ಕರೆದುಕೊಂಡು ಬಂದರೂ ಸಹ 1 ನೇ ಅರ್ಜಿದಾರರು ತನ್ನ ಹಳೆಯ ನಡವಳಿಕೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದ ಕಾರಣ ಎದುರುದಾರರು 1 ನೇ ಅರ್ಜಿದಾರರನ್ನು ಕರೆದುಕೊಂಡು ಹೋಗಿ ಬೆಂಗಳೂರಿನಲ್ಲಿ ಬಾಡಿಗೆ ಮನೆ ಮಾಡಿಕೊಂಡು ಜೀವನ ನಡೆಸುತ್ತಿದ್ದು, ಅಲ್ಲಿಯೂ ಸಹ ಮಗುವಿನ ಯೋಗಕ್ಷೇಮವನ್ನು ನೋಡಿಕೊಳ್ಳದೆ ಎದುರುದಾರರನ್ನು ಅವಾಚ್ಯ ಶಬ್ದಗಳಿಂದ ಬೈದು ದೈಹಿಕವಾಗಿ ಹಾಗೂ ಮಾನಸಿಕವಾಗಿ ಎದುರುದಾರರನ್ನು ಹಿಂಸಿಸುತ್ತಿದ್ದು, ಆದರೂ ಸಹ ಎದುರುದಾರರು ಇಂದಲ್ಲ ನಾಳೆ ಸರಿ ಹೋಗಬಹುದು ಎಂದು ಜೀವನ ನಡೆಸುತ್ತಿರುತ್ತಾರೆ.

5. ಎದುರುದಾರರು ಮುಂದುವರೆದು ತಮ್ಮ ತಕರಾರಿನಲ್ಲಿ ಹೇಳುವುದೇನೆಂದರೆ, ಕೋವಿಡ್ - 19 ಸಂದರ್ಭದಲ್ಲಿ ಎದುರುದಾರರಿಗೆ ಬೈಕಿನಲ್ಲಿ ಹೋಗುತ್ತಿದ್ದಾಗ ಅಪಘಾತವಾಗಿ ಬಲಗಾಲು ಮುರಿದಿದ್ದು ಹಾಗೂ ದೇಹದ ಇತರೆ ಭಾಗಗಳಿಗೆ ಸಣ್ಣ ಪುಟ್ಟ ಗಾಯಗಳಾಗಿ ಕಾಲಿನ ಶಸ್ತ್ರ ಚಿಕಿತ್ಸೆಯು ಆಗಿದ್ದು, ಆ ಸಂದರ್ಭದಲ್ಲಿಯೂ ಸಹ 1 ನೇ ಅರ್ಜಿದಾರರು ಎದುರುದಾರರನ್ನು ಆರೈಕೆ ಮಾಡಿರುವುದಿಲ್ಲ ಹಾಗೂ ಎದುರುದಾರರು 1 ನೇ ಅರ್ಜಿದಾರರ ಮನೆಯವರಿಗೆ ರೂ.50,000/- ಹಣವನ್ನು ಕೊಟ್ಟಿದ್ದು, ಸದರಿ ಹಣವನ್ನು ವಾಪಸ್ಸು ಕೊಡುವಂತೆ ಕೇಳಿದಾಗ 1 ನೇ ಅರ್ಜಿದಾರರಿಗೂ ಎದುರುದಾರರಿಗೂ ವೈಮನಸ್ಸು ಹೆಚ್ಚಾಗಿ ಎದುರುದಾರರಿಗೆ ಹಿಂಸೆ ನೀಡುವುದನ್ನು ಮುಂದುವರೆಸಿರುತ್ತಾರೆ. ಅಲ್ಲದೆ 1 ನೇ ಅರ್ಜಿದಾರರು ಬೆಂಗಳೂರಿನಲ್ಲಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿ ಸಂಪಾದಿಸಿದ ಹಣವನ್ನೆಲ್ಲಾ ಖರ್ಚು ಮಾಡುತ್ತಿದ್ದು, ಸದರಿ ವಿಚಾರವನ್ನು ಕೇಳಿದಾಗ ಬೇಜವಾಬ್ದಾರಿಯಿಂದ ವರ್ತಿಸುತ್ತಿರುತ್ತಾರೆ. ಹೀಗಿರುವಾಗ, 1 ನೇ ಅರ್ಜಿದಾರರು ಎದುರುದಾರರ ವಿರುದ್ಧ ಸುಳ್ಳು ದೂರನ್ನು ನೀಡಿದ್ದು, ಪೋಲೀಸರು ಎದುರುದಾರರಿಗೆ ಹಿಂಸೆಯನ್ನು ನೀಡುತ್ತಿರುತ್ತಾರೆ. ಅಲ್ಲದೆ 2 ನೇ ಅರ್ಜಿದಾರರ ಶಾಲೆಯ ವೆಚ್ಚವನ್ನು ಎದುರುದಾರರೇ ಭರಿಸುತ್ತಿದ್ದರೂ ಸಹ 1 ನೇ ಅರ್ಜಿದಾರರು ಎದುರುದಾರರ ಗಮನಕ್ಕೆ ಬರದಂತೆ 2 ನೇ ಅರ್ಜಿದಾರರನ್ನು ಶಾಲೆಯಿಂದ ಬಿಡಿಸಿಕೊಂಡು ಕರೆದುಕೊಂಡು ಹೋಗಿರುತ್ತಾರೆ ಹಾಗೂ ಈ ಅರ್ಜಿ ಚಾಲ್ತಿಯಲ್ಲಿರಬೇಕಾದರೇ ಎದುರುದಾರರು ರೂ.10,000/- ಗಳನ್ನು ತನ್ನ ಮಗನ ವಿಧ್ಯಾಭ್ಯಾಸಕ್ಕಾಗಿ ನೀಡಿರುತ್ತಾರೆ. ಇನ್ನು ಎದುರುದಾರರಿಗೆ ರಸ್ತೆ

ಅಪಘಾತವಾಗಿ ಕಾಲು ಮುರಿದುಕೊಂಡಿದ್ದರಿಂದ ಎದುರುದಾರರು ಕೆಲಸ ಮಾಡುತ್ತಿರುವ ಖಾಸಗಿ ಕಂಪನಿಯವರು ಕೆಲಸ ಮಾಡಲು ಆಗುವುದಿಲ್ಲ ಬರಬೇಡಿ ಎಂದು ಹೇಳಿದ್ದು, ಆದರೂ ಕೂಡಾ ಎದುರುದಾರರು ತಮ್ಮ ಮನೆಯ ಕಷ್ಟ ಪರಿಸ್ಥಿತಿಯನ್ನು ಹೇಳಿಕೊಂಡು ಕಡಿಮೆ ವೇತನಕ್ಕಾಗಿ ಕೆಲಸ ಮಾಡುತ್ತಿರುತ್ತಾರೆ ಹಾಗೂ ಒಂದು ವೇಳೆ ಅರ್ಜಿದಾರರುಗಳು ಎಲ್ಲಾ ಕೆಟ್ಟ ನಡವಳಿಕೆಗಳನ್ನು ಸರಿಪಡಿಸಿಕೊಂಡು ಎದುರುದಾರರೊಂದಿಗೆ ಜೀವನ ನಡೆಸುವುದಾದರೆ ತಾನು ನೋಡಿಕೊಳ್ಳುವುದಕ್ಕೆ ಸಿದ್ಧನಿದ್ದೇನೆ ಎಂದು ಹೇಳುತ್ತಾ, ಅರ್ಜಿದಾರರು ಎದುರುದಾರರ ವಿರುದ್ಧ ತಂದಿರುವ ಮಧ್ಯಂತರ ಅರ್ಜಿ- 1 ನ್ನು ವಜಾಗೊಳಿಸಬೇಕಾಗಿ ಕೋರಿರುತ್ತಾರೆ.

6. ಮುಂದುವರೆದು, ಅರ್ಜಿದಾರರು ಮಧ್ಯಂತರ ಅರ್ಜಿ -1 ಕ್ಕೆ ಲಿಖಿತ ವಾದ ಪತ್ರವನ್ನು ಸಹ ಸಲ್ಲಿಸಿ ಮಧ್ಯಂತರ ಅರ್ಜಿ - 1 ರಲ್ಲಿ ಹೇಳಿರುವ ಅಂಶಗಳನ್ನೇ ಪುನರುಚ್ಚರಿಸಿರುತ್ತಾ ಹೇಳುವುದೇನೆಂದರೆ, ಈ ನ್ಯಾಯಾಲಯವು ದಿನಾಂಕಃ 07.02.2022 ರಂದು ಎದುರುದಾರರು ಅರ್ಜಿದಾರರಿಗೆ ತಲಾ ರೂ.4,000/- ಗಳನ್ನು ಕೊಡಬೇಕೆಂದು ಆದೇಶಿಸಿ ಎದುರುದಾರರಿಗೆ ನೋಟೀಸನ್ನು ನೀಡಿದ್ದು, ಅದಕ್ಕೆ ಪ್ರತಿಯಾಗಿ ಎದುರುದಾರರು ನ್ಯಾಯಾಲಯಕ್ಕೆ ತಮ್ಮ ವಕೀಲರ ಮೂಲಕ ಹಾಜರಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ನಂತರ ಎದುರುದಾರರು ಸದರಿ ಆದೇಶವನ್ನು ಪ್ರಶ್ನಿಸಿ ಮಾನ್ಯ 2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಕ್ರಿಮಿನಲ್ ಅಪೀಲ್ ನಂ 98/2022 ರಂತೆ ಅಪೀಲನ್ನು ಹೋಗಿದ್ದು, ಆದರೆ ಮಾನ್ಯ 2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಸದರಿ ಅಪೀಲು ಊರ್ಜಿತವಲ್ಲ ಎಂದು ವಜಾ ಮಾಡಿ ಅದೇಶಿಸಿರುತ್ತದೆ, ಆದರೂ ಕೂಡಾ ಎದುರುದಾರರು ಅರ್ಜಿದಾರರಿಗೆ ಇದುವರೆವಿಗೂ ಜೀವನಾಂಶದ ಹಣವನ್ನು ನೀಡಿರುವುದಿಲ್ಲ. ಆದ್ದರಿಂದ ಮೇಲ್ಕಂಡ ಕಾರಣಗಳಿಗಾಗಿ ಮಧ್ಯಂತರ ಅರ್ಜಿ-1 ನ್ನು ಪುರಸ್ಕರಿಸಿ ಅರ್ಜಿದಾರರಿಗೆ ಎದುರುದಾರರು ಜೀವನಾಂಶದ ಹಣವನ್ನು ನೀಡುವಂತೆ ಆದೇಶ ಮಾಡಬೇಕಾಗಿ ಕೋರಿರುತ್ತಾರೆ.

7. ಈ ಅರ್ಜಿಯಲ್ಲಿರುವ ವಿಷಯ ಮತ್ತು ಎದುರುದಾರರ ತಕರಾರಿನ ಅನ್ವಯ ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ಪರಿಗಣನೆಗೆ ಉದ್ಭವವಾಗಿರುತ್ತದೆ.

1. ಅರ್ಜಿದಾರರು ಎದುರುದಾರರ ವಿರುದ್ಧ ಮಧ್ಯಂತರ ಅರ್ಜಿ -1 ರಲ್ಲಿ ಸಲ್ಲಿಸಿರುವ ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ರಕ್ಷಣಾ ಅಧಿನಿಯಮ 2005 ಕಲಂ 22 ರಡಿ ಪರಿಹಾರ ಪಡೆಯಲು ಅರ್ಹರೆ?

2. ಯಾವ ಆದೇಶ?

8. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು.

9. ಮೇಲ್ಕಂಡ ಅಂಶಗಳಿಗೆ ಅರ್ಜಿದಾರರ ಮಧ್ಯಂತರ ಅರ್ಜಿ, ಎದುರುದಾರರ ತಕರಾರು ಹಾಗೂ ಲಭ್ಯವಿರುವ ದಾಖಲಾತಿಗಳನ್ನು ಆಧರಿಸಿ ನ್ಯಾಯಾಲಯವು ಈ ಮೇಲಿನ ಅಂಶಗಳಿಗೆ ಈ ಕೆಳಕಂಡಂತೆ ನಿರ್ಣಯಿಸಿರುತ್ತದೆ.

ಅಂಶ-1 ಃ ಭಾಗಶಃ ಸಕಾರಾತ್ಮಕವಾಗಿ

ಅಂಶ-2 ಃ ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗಾಗಿ

ಃಃ ಕಾರಣಗಳು ಃಃ

10. ಅಂಶಃ 1 : ಅರ್ಜಿದಾರರು ಎದುರುದಾರರ ವಿರುದ್ಧ ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ರಕ್ಷಣಾ ಅಧಿನಿಯಮದಡಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯೊಂದಿಗೆ ಮಧ್ಯಂತರ ಅರ್ಜಿ-1 ನ್ನು ಸಲ್ಲಿಸಿ, ಮಾಸಿಕ ರೂ.30,000-00 ಗಳ ಮಧ್ಯಂತರ ಜೀವನಾಂಶವನ್ನು ಎದುರುದಾರರು ಅರ್ಜಿದಾರರಿಗೆ ಸದರಿ ಜೀವನಾಂಶ ಅರ್ಜಿ ತೀರ್ಮಾನವಾಗುವವರೆಗೂ ಪಾವತಿ ಮಾಡುವಂತೆ ಆದೇಶ ಮಾಡಬೇಕಾಗಿ ಕೋರಿರುತ್ತಾರೆ.

11. ಹೀಗಿರುವಾಗ ಅರ್ಜಿದಾರರು ಮತ್ತು ಎದುರುದಾರರ ವಿವಾಹವು ದಿನಾಂಕಃ 07.03.2010 ರಂದು ಶ್ರೀ ರಾಘವೇಂದ್ರ ಕಲ್ಯಾಣ ಮಂಟಪ, ಕೋಟೆ, ಬೇಲೂರಿನಲ್ಲಿ

ನೆರವೇರಿರುವ ಬಗ್ಗೆ ಹಾಗೂ ಉಭಯತ್ರರ ದಾಂಪತ್ಯದ ಫಲವಾಗಿ 2 ನೇ ಅರ್ಜಿದಾರರು ಜನಿಸಿರುವ ಬಗ್ಗೆಯೂ ಸಹ ಯಾವುದೇ ವಿವಾದ ಇರುವುದಿಲ್ಲ. ಸದರಿ ಅಂಶಕ್ಕೆ ಪೂರಕವಾಗಿ 1 ನೇ ಅರ್ಜಿದಾರರು ಮತ್ತು ಎದುರುದಾರರ ಮದುವೆಯ ಆಹ್ವಾನ ಪತ್ರಿಕೆ, ಫೋಟೋಗಳನ್ನು ಹಾಗೂ 2 ನೇ ಅರ್ಜಿದಾರರನ್ನು ಶಾಲೆಗೆ ದಾಖಲಿಸಿ ಶುಲ್ಕವನ್ನು ಪಾವತಿ ಮಾಡಿರುವ ಬಗ್ಗೆ ರಶೀದಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತಾರೆ. ಸದರಿ ಅಂಶವನ್ನು ಎದರುದಾರರು ತಮ್ಮ ತಕರಾರಿನಲ್ಲಿ ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ಹೀಗೆ ಒಪ್ಪಿಕೊಂಡ ಅಂಶದ ಬಗ್ಗೆ ಹೆಚ್ಚಿನ ವಿಮರ್ಶೆಗೆ ಆಸ್ಪದ ನೀಡದೇ, 1 ಮತ್ತು 2 ನೇ ಅರ್ಜಿದಾರರು ಎದುರುದಾರರ ಕಾನೂನುಬದ್ಧ ಪತ್ನಿ ಹಾಗೂ ಮಗ ಎಂದು ನ್ಯಾಯಾಲಯವು ತೀರ್ಮಾನಕ್ಕೆ ಬರುತ್ತದೆ.

12. ಮುಂದುವರೆದು,ಅರ್ಜಿದಾರರು ತಮ್ಮ ಅರ್ಜಿಯಲ್ಲಿ ವಿವಾಹದ ಸಮಯದಲ್ಲಿ ಎದುರುದಾರರ ಬೇಡಿಕೆಯಂತೆ ಚಿನ್ನಾಭರಣಗಳನ್ನು ವರದಕ್ಷಿಣೆಯಾಗಿ ನೀಡಿ, ಅದ್ದೂರಿಯಾಗಿ ವಿವಾಹ ನಡೆಸಿಕೊಟ್ಟಿರುವುದಾಗಿ ಹೇಳಿರುತ್ತಾರೆ. ಆದರೆ ಎದುರುದಾರರು ತಮ್ಮ ತಕರಾರಿನಲ್ಲಿ ಸದರಿ ಅಂಶವನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಸದರಿ ಒಡವೆಗಳನ್ನು ವರದಕ್ಷಿಣೆಯಾಗಿ ಅರ್ಜಿದಾರರು ಮನೆಯವರು ಉಭಯತ್ರರ ಮದುವೆಯ ಸಮಯದಲ್ಲಿ ಎದುರುದಾರರಿಗೆ ನೀಡಿದ ಬಗ್ಗೆ ತೋರಿಸಲು ಈ ಸಮಯದಲ್ಲಿ ಯಾವುದೇ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಇದರಿಂದ ಸದರಿ ವರದಕ್ಷಿಣೆಯನ್ನು ಅರ್ಜಿದಾರರ ತವರು ಮನೆಯವರು ಎದುರುದಾರರಿಗೆ ನೀಡಿದ ಬಗ್ಗೆ ಯಾವುದೇ ದಾಖಲೆಗಳು ಇಲ್ಲದ ಕಾರಣ ಸದರಿ ಅಂಶದ ಬಗ್ಗೆ ಈ ಹಂತದಲ್ಲಿ ಸ್ಪಷ್ಟ ನಿಲುವು ತೆಗೆದುಕೊಳ್ಳಲು ಬರುವುದಿಲ್ಲ.

13. ಮುಂದುವರೆದು ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಎದುರುದಾರರ ತಾಯಿ ಹಾಗೂ ಇನ್ನಿತರ ಸಂಬಂಧಿಕರ ಮಾತನ್ನು ಕೇಳಿ 1 ನೇ ಅರ್ಜಿದಾರರಿಗೆ ಹೊಡೆದು ಬಡೆದು ಮಾಡಿ ಊಟ - ಬಟ್ಟೆಯನ್ನು ಸಹ ಕೊಡದೆ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆ ಕಿರುಕುಳ ನೀಡುತ್ತಿದ್ದು, ಅಲ್ಲದೆ 2 ನೇ ಅರ್ಜಿದಾರರಿಗೆ ಶಾಲೆಯ ಶುಲ್ಕವನ್ನು ಭರಿಸದೆ ತನ್ನ ತವರು ಮನೆಯಿಂದ ಹಣವನ್ನು ತಂದು ಓದಿಸು ಎಂದು ಹೇಳಿ ಹಲ್ಲೆ ಮಾಡಿ ಮನೆಯಿಂದ

ಹೊರಹಾಕಲು ಸಹ ಪ್ರಯತ್ನ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಇದಕ್ಕೆ ಪೂರಕವಾಗಿ 1 ನೇ ಅರ್ಜಿದಾರರು ಎದುರುದಾರರ ವಿರುದ್ಧ ಬೆಂಗಳೂರು ನಗರದ ಸುಬ್ರಮಣ್ಯಪುರ ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿದ ಪರಿಣಾಮ ಎದುರುದಾರರ ವಿರುದ್ಧ ಕ್ರೈ.ನಂ.300/2021 ರಂತೆ ಪ್ರಥಮ ವರ್ತಮಾನ ವರದಿ ದಾಖಲಾಗಿರುವ ಬಗ್ಗೆ ದಾಖಲಾತಿಗಳನ್ನು ಸಹ ಹಾಜರು ಪಡಿಸಿರುತ್ತಾರೆ. ಆದರೆ ಎದುರುದಾರರು ತಮ್ಮ ತಕರಾರಿನಲ್ಲಿ ತಾನೇ 2 ನೇ ಅರ್ಜಿದಾರರ ವಿಧ್ಯಭ್ಯಾಸವನ್ನು ನೋಡಿಕೊಳ್ಳುತ್ತಿದ್ದು ಹಾಗೂ 1 ನೇ ಅರ್ಜಿದಾರರೇ ಸ್ವತಃ ತನ್ನನ್ನು ನಿರ್ಲಕ್ಷಿಸುತ್ತಿದ್ದು, ಎದುರುದಾರರು ಈಗಲೂ ಸಹ ಅರ್ಜಿದಾರರೊಂದಿಗೆ ಸಂಸಾರ ನಡೆಸಿಕೊಂಡು ಹೋಗಲು ಸಿದ್ಧನಿರುವುದಾಗಿ ಹೇಳಿರುತ್ತಾರೆ. ಇದರಿಂದ ಎದುರುದಾರರು ಅರ್ಜಿದಾರರನ್ನು ಸಾಕಿ ಸಲಹುವ ಜವಾಬ್ದಾರಿಯಿಂದ ನುಣುಚಿಕೊಂಡಿರುವುದು ಸ್ಪಷ್ಟವಾಗಿ ಮೇಲ್ನೋಟಕ್ಕೆ ಕಂಡುಬರುತ್ತದೆ. ಇದರಿಂದ ಪ್ರಸ್ತುತ ಎದುರುದಾರರು ಅರ್ಜಿದಾರರನ್ನು ನೋಡಿಕೊಳ್ಳದೇ ನಿರ್ಲಕ್ಷತೆಯನ್ನು ತೋರಿಸಿರುವುದು ಸಹ ಮೇಲ್ನೋಟಕ್ಕೆ ಕಂಡುಬರುತ್ತದೆ. ಹೀಗಿರುವಾಗ ಎದುರುದಾರನು ತನ್ನ ತಕರಾರಿನಲ್ಲಿ ಒಪ್ಪಿಕೊಂಡಂತೆ ಅರ್ಜಿದಾರರು ತನ್ನ ಕಾನೂನು ಬದ್ಧ ಪತ್ನಿ ಹಾಗೂ ಮಗನಾಗಿರುವುದರಿಂದ ಅವರನ್ನು ಸಾಕಿಸಲಹುವ ಜವಾಬ್ದಾರಿ ಎದುರುದಾರನ ಮೇಲೆ ಇರುತ್ತದೆ.

14. ಇನ್ನು ಅರ್ಜಿದಾರರಿಗೆ ಯಾವುದೇ ಆದಾಯದ ಮೂಲಗಳಿಲ್ಲದೇ, ಅವರ ಜೀವನ ನಿರ್ವಹಣೆ ಕಷ್ಟಸಾಧ್ಯವಾಗಿರುತ್ತದೆ ಎಂದು ಹೇಳಿರುತ್ತಾರೆ. ಅಲ್ಲದೇ ಎದುರುದಾರರು ಸೇಲ್ಸ್ ಎಕ್ಸಿಕ್ಯೂಟೀವ್ ಆಗಿ ಅಮೇಜಾನ್ ಪ್ರೈವೇಟ್ ಲಿ., ನಲ್ಲಿ ಕೆಲಸ ಮಾಡುತ್ತಾ ತಿಂಗಳಿಗೆ ರೂ.60,000/- ಗಳ ವೇತನವನ್ನು ಪಡೆಯುತ್ತಿದ್ದು, ಅದಕ್ಕೆ ಪೂರಕವಾಗಿ ಕೇವಲ ಎದುರುದಾರರ ಸದರಿ ಕಂಪನಿಯ ಗುರುತಿನ ಚೀಟಿಯನ್ನು ಹಾಜರುಪಡಿಸಿರುತ್ತಾರೆ ಮತ್ತು ವೇತನ ಪಟ್ಟಿ ಅಥವಾ ಇನ್ಯಾವುದೇ ಆದಾಯದ ಮೂಲಗಳ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಲು ಅರ್ಜಿದಾರರು ವಿಫಲರಾಗಿರುತ್ತಾರೆ. ಇನ್ನು ಇದಕ್ಕೆ ವ್ಯತಿರಿಕ್ತವಾಗಿ ಎದುರುದಾರರು ತನ್ನ ತಕರಾರಿನಲ್ಲಿ ತನಗೆ ಅಪಘಾತವಾಗಿ ಕಾಲಿನ ಶಸ್ತ್ರ ಚಿಕಿತ್ಸೆಯಾಗಿದ್ದು ಅದಕ್ಕೆ ಪೂರಕವಾಗಿ ಹಲವಾರು ವೈದ್ಯಕೀಯ ಪ್ರಮಾಣ ಪತ್ರಗಳು ಫೋಟೋ, ಸಿಡಿ ಯನ್ನು ಹಾಜರುಪಡಿಸಿ ತಾನು ಕೆಲಸ ಮಾಡುತ್ತಿರುವ ಖಾಸಗಿ ಕಂಪನಿಯವರು ತನಗೆ ಕೆಲಸ ಮಾಡಲು ಆಗುವುದಿಲ್ಲ

ಬರಬೇಡಿ ಎಂದು ಹೇಳಿದ್ದು, ಆದರೂ ಕೂಡಾ ಅರ್ಜಿದಾರರನ್ನು ಹಾಗೂ ತನ್ನ ವಯಸ್ಸಾದ ತಾಯಿಯನ್ನು ನೋಡಿಕೊಳ್ಳುವ ದೃಷ್ಟಿಯಿಂದ ಕಡಿಮೆ ವೇತನಕ್ಕಾಗಿ ಕೆಲಸ ಮಾಡುತ್ತಿರುವುದಾಗಿ ಹೇಳಿರುತ್ತಾರೆ. ಆದ್ದರಿಂದ ಎದುರುದಾರರು ಅರ್ಜಿದಾರರಿಗೆ ಜೀವನಾಂಶ ಕೊಡಲು ಬಾಧ್ಯನಾಗಿರುವುದಿಲ್ಲವೆಂದು ಸಹ ತಮ್ಮ ತಕರಾರಿನಲ್ಲಿ ಹೇಳಿರುತ್ತಾರೆ. ಇನ್ನು ಅರ್ಜಿದಾರರ ಪರ ವಕೀಲರು ತಮ್ಮ ವಾದ ಮಂಡನೆ ಸಮಯದಲ್ಲಿ ಎದುರುದಾರರು ಪ್ರವಾಸಕ್ಕೆ ಹೋಗಿರುವ ಬಗ್ಗೆ ಹಾಗೂ ಅಲ್ಲಿ ಹೆಜ್ಜೆ ಹಾಕುತ್ತಿರುವ ಬಗ್ಗೆ ಮತ್ತು ಕಂಪನಿಯಲ್ಲಿ ಸ್ನೇಹಿತರ ಜೊತೆ ಸಂಭ್ರಮಾಚರಣೆ ಮಾಡುತ್ತಿರುವ ಬಗ್ಗೆ ಕೆಲವು ಛಾಯಚಿತ್ರಗಳನ್ನು ಹಾಜರುಪಡಿಸಿ ಎದುರುದಾರರು ಕೆಲಸ ಮಾಡಲು ಶಕ್ತರೆಂದು ಹಾಗೂ ಅರ್ಜಿದಾರರಿಗೆ ಜೀವನಾಂಶ ನೀಡಲು ಬಾಧ್ಯರಾಗಿರುತ್ತಾರೆ ಎಂದು ತಮ್ಮ ನಿಲುವನ್ನು ತೆಗೆದುಕೊಂಡಿರುತ್ತಾರೆ ಉಭಯ ಪಕ್ಷಗಾರರು ಹಾಜರುಪಡಿಸಿದ ದಾಖಲೆಗಳಿಗೆ ಸಂಬಂಧಿಸಿದಂತೆ ಕೂಲಂಕುಶವಾದ ಸಾಕ್ಷ್ಯ ವಿಚಾರಣೆಯ ಅಗತ್ಯ ಇರುತ್ತದೆ. ಆದ್ದರಿಂದ ಈ ಮೇಲ್ಕಂಡ ಕಾರಣಗಳಿಂದ ಈ ಹಂತದಲ್ಲಿ ಎದುರುದಾರರು ಇಂತಿಷ್ಟು ಆದಾಯವನ್ನು ಪಡೆಯುತ್ತಿದ್ದು, ಅರ್ಜಿದಾರರನ್ನು ಸಾಕಿ-ಸಲಹುವ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಸಾಧ್ಯವಿರುವುದಿಲ್ಲ. ಏಕೆಂದರೆ ಅರ್ಜಿದಾರರು ಎದುರುದಾರರ ಕಾನೂನು ಬದ್ಧ ಪತ್ನಿ ಹಾಗೂ ಮಗನಾಗಿರುವುದರಿಂದ ಅವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಎದುರುದಾರನ ಕರ್ತವ್ಯವಾಗಿರುತ್ತದೆ.

15. ಇನ್ನು ಅರ್ಜಿದಾರರ ಪರ ವಕೀಲರು ತಮ್ಮ ವಾದ ಮಂಡನೆ ಸಮಯದಲ್ಲಿ ಎದುರುದಾರರು ಈ ನ್ಯಾಯಾಲಯವು ದಿನಾಂಕಃ 07.02.2022 ರಂದು ಎದುರುದಾರರು ಅರ್ಜಿದಾರರಿಗೆ ತಲಾ ರೂ.4,000/- ಗಳನ್ನು ಕೊಡಬೇಕೆಂದು ಮಾಡಿರುವ ಆದೇಶವನ್ನು ಪ್ರಶ್ನಿಸಿ ಮಾನ್ಯ 2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಕ್ರಿಮಿನಲ್ ಅಪೀಲ್ ನಂ 98/2022 ರಂತೆ ಅಪೀಲನ್ನು ದಾಖಲಿಸಿದ್ದು, ಅದರ ದಿನಾಂಕಃ10-08-2022 ರ ಆದೇಶವನ್ನು ಹಾಜರುಪಡಿಸಿರುತ್ತಾರೆ. ಆದರೆ ಸದರಿ ಆದೇಶದಲ್ಲಿ ಮಾನ್ಯ 2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಸದರಿ ಅಪೀಲು ಊರ್ಜಿತವಲ್ಲ ಎಂದು ವಜಾ ಮಾಡಿರುತ್ತದೆ. ಅಲ್ಲದೆ

ಅರ್ಜಿದಾರರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪುಗಳಾದ **2021 (2) KCCR 1705 between Sri.Chethan R.Lokande V/s Smt.Sushma J.** ಮತ್ತು **2020 (2) Kar.L.R. 391 between Smt.K.P.Sudha V/s Sri.A.C.Thrinesh and Another** ಹಾಜರುಪಡಿಸಿ ಕೌಟುಂಬಿಕ ದೌರ್ಜನ್ಯದಿಂದ ಮಹಿಳಾ ರಕ್ಷಣಾ ಕಾಯ್ದೆ 2005 ರಡಿಯಲ್ಲಿ ಅರ್ಜಿದಾರರಿಗೆ ಎದುರುದಾರರು ಪರಿಹಾರವನ್ನು ನೀಡಲು ಬಾಧ್ಯನಾಗಿರುತ್ತಾನೆ ಎಂದು ಹಾಗೂ ಎದುರುದಾರರು ಅರ್ಜಿದಾರರ ವಿರುದ್ಧ ಹೋಗಿರುವ ಅಪೀಲುಗಳು ವಜಾ ಆಗಿ ಅರ್ಜಿದಾರರ ಪರವಾಗಿಯೇ ಆದೇಶವಾಗಿರುವ ಅಂದರೆ ಎದುರುದಾರರು ಅರ್ಜಿದಾರರಿಗೆ ಪರಿಹಾರವನ್ನು ನೀಡಲು ಆದೇಶವಾಗಿರುವ ಬಗ್ಗೆ ತೀರ್ಪುಗಳಾಗಿರುತ್ತದೆ.

16. ಈ ಹಂತದಲ್ಲಿ ಮೇಲಿನ ವಿವರಣೆಗಳನ್ನು ಹಾಗೂ ಅರ್ಜಿದಾರರು ಹಾಜರುಪಡಿಸಿರುವ ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪುಗಳನ್ನು ಪರಿಗಣಿಸಿದಾಗ ಅರ್ಜಿದಾರರು ಎದುರುದಾರರ ಕಾನೂನು ಬದ್ಧ ಪತ್ನಿ ಹಾಗೂ ಮಗ ಆಗಿರುವುದರಿಂದ ಎದುರುದಾರರು ಅರ್ಜಿದಾರರಿಗೆ ಪರಿಹಾರವನ್ನು ನೀಡಲು ನಿರಾಕರಿಸುವಂತ್ತಿಲ್ಲ. ಆದಕಾರಣ ಎದುರುದಾರರು ಮಾಸಿಕ ಅರ್ಜಿದಾರರಿಗೆ ತಲಾ ರೂ. 3,000-00 ಗಳ ಮಧ್ಯಂತರ ಜೀವನಾಂಶವನ್ನು ಪಾವತಿಸಲು ಬಾಧ್ಯರಾಗಿರುತ್ತಾರೆ. ಈ ರೀತಿ ಆದೇಶ ಮಾಡಿದಲ್ಲಿ ಉಭಯ ಪಕ್ಷಗಾರಿಗೂ ನ್ಯಾಯದಾನ ಮಾಡಿದಂತೆ ಆಗುತ್ತದೆ. ಈ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಅರ್ಜಿದಾರರು ಎದುರುದಾರರಿಂದ ಮಾಸಿಕ ತಲಾ ರೂ.3,000-00 ಗಳ ಮಧ್ಯಂತರ ಜೀವನಾಂಶ ಪರಿಹಾರವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ. ಅದರಂತೆ ಅಂಶ-1 ನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

17. ಅಂಶಃ 2 : ಈ ಮೇಲ್ಕಂಡ ಒಂದನೇ ಅಂಶದಲ್ಲಿ ಹೇಳಿದ ಕಾರಣಗಳ ಆಧಾರದ ಮೇಲೆ ಈ ಕೆಳಕಂಡಂತೆ ನ್ಯಾಯಾಲಯ ಉತ್ತರಿಸಿ, ಈ ಕೆಳಕಂಡಂತೆ ಅಂತಿಮ ಆದೇಶ

: ಆದೇಶ :

ಅರ್ಜಿದಾರರು ಎದುರುದಾರರ ವಿರುದ್ಧ ಕೌಟುಂಬಿಕ ದೌರ್ಜನ್ಯದಿಂದ ಮಹಿಳಾ ರಕ್ಷಣಾ ಕಾಯ್ದೆ ಕಲಂ 22 ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ-1 ನ್ನು ಭಾಗಶಃ ಪುರಸ್ಕರಿಸಿದೆ.

ತತ್ಪರಿಣಾಮವಾಗಿ ಎದುರುದಾರರು ಮಧ್ಯಂತರ ಅರ್ಜಿ ದಾಖಲಿಸಿದ ದಿನಾಂಕದಿಂದ ಈ ಪ್ರಕರಣ ಇತ್ಯರ್ಥವಾಗುವ ತನಕ ಅರ್ಜಿದಾರರಿಗೆ ಮಾಸಿಕ ತಲಾ ರೂ. 3,000-00 ಗಳಂತೆ ಒಟ್ಟು ರೂ.6,000/- ಗಳ ಮಧ್ಯಂತರ ಜೀವನಾಂಶದ ಪರಿಹಾರವನ್ನು ಪಾವತಿಸತಕ್ಕದ್ದು.

ಈ ಮೊದಲೇ ಮಧ್ಯಂತರ ಅರ್ಜಿಯ ಆದೇಶ ಮಾಡಿದಂತೆ ತಲಾ ರೂ.4,000/- ಪರಿಹಾರವಾಗಿ ನೀಡಲು ಆದೇಶಿಸಿರುವ ಆದೇಶವನ್ನು ಈ ಆದೇಶದ ಮೂಲಕ ತಲಾ ರೂ.3,000/- ಎಂದು ಮಾರ್ಪಾಡು ಮಾಡಲಾಗಿದೆ.

(ಮೇಲ್ಕಂಡ ಆದೇಶವನ್ನು ಶೀಘ್ರಲಿಪಿಗಾರಳಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನವನ್ನು ಕೊಟ್ಟು ಬೆರಳಚ್ಚಿನ ನಂತರ ತಿದ್ದುಪಡಿಯನ್ನು ಮಾಡಿ, ದಿನಾಂಕಃ 30 ನೇ ಆಗಸ್ಟ್ 2023 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.)

(ಪ್ರಸನ್ನ ಕುಮಾರ್ ಸಿ.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಬೇಲೂರು.

ಪ್ರತ್ಯೇಕ ಪ್ರತಿಯ ಆದೇಶದ ಭಾಗವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ.

## ಆದೇಶ

ಅರ್ಜಿದಾರರು ಎದುರುದಾರರ ವಿರುದ್ಧ ಕೌಟುಂಬಿಕ ದೌರ್ಜನ್ಯದಿಂದ ಮಹಿಳಾ ರಕ್ಷಣಾ ಕಾಯ್ದೆ ಕಲಂ 22 ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ-1 ನ್ನು ಭಾಗಶಃ ಪುರಸ್ಕರಿಸಿದೆ.

ತತ್ಪರಿಣಾಮವಾಗಿ ಎದುರುದಾರರು ಮಧ್ಯಂತರ ಅರ್ಜಿ ದಾಖಲಿಸಿದ ದಿನಾಂಕದಿಂದ ಈ ಪ್ರಕರಣ ಇತ್ಯರ್ಥವಾಗುವ ತನಕ ಅರ್ಜಿದಾರರಿಗೆ ಮಾಸಿಕ ತಲಾ ರೂ. 3,000-00 ಗಳಂತೆ ಒಟ್ಟು ರೂ.6,000/- ಗಳ ಮಧ್ಯಂತರ ಜೀವನಾಂಶದ ಪರಿಹಾರವನ್ನು ಪಾವತಿಸತಕ್ಕದ್ದು.

ಈ ಮೊದಲೇ ಮಧ್ಯಂತರ ಅರ್ಜಿಯ ಆದೇಶ ಮಾಡಿದಂತೆ ತಲಾ ರೂ.4,000/- ಪರಿಹಾರವಾಗಿ ನೀಡಲು ಆದೇಶಿಸಿರುವ ಆದೇಶವನ್ನು ಈ ಆದೇಶದ ಮೂಲಕ ತಲಾ ರೂ.3,000/- ಎಂದು ಮಾರ್ಪಾಡು ಮಾಡಲಾಗಿದೆ.

(ಪ್ರಸನ್ನ ಕುಮಾರ್ ಸಿ.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಬೇಲೂರು.